# ಸಂಭವ್: ಸೇನೆಯ ಸಂವಹನ ಅಸ್ತ್ರ




ಪಾಕಿಸ್ತಾನದ ಮೇಲೆ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ವೇಳೆ ಸಂಭವ್‌ನ ಪಾತ್ರ ಪ್ರಮುಖವಾದದ್ದು. ಅಷ್ಟಕ್ಕೂ ಸಂಭವ್ ಎಂದರೇನು ಗೊತ್ತಾ? ಏನಿದರ ವಿಶೇಷ ಅಂತೀರಾ? ಈ ಲೇಖನ ಓದಿ.

■ **ಶಶಿಕುಮಾರ್ ಸಿ.**

ಪಾಕಿಸ್ತಾನದ ಉಗ್ರ ಸಂಘಟನೆಗಳ ಮೇಲೆ ಭಾರತೀಯ ಸೇನೆ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ನಡೆಸಿ, ಉಗ್ರರನ್ನು ಸದೆಬಡಿದಿತ್ತು. ಈ ಕಾರ್ಯಾಚರಣೆ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯ ಪ್ರತಿಕಾರವಾಗಿತ್ತು. ಇನ್ನು ಈ ದಾಳಿ ವೇಳೆ ಸೇನಾ ಸಿಬ್ಬಂದಿಯ ಸಂವಹನದಲ್ಲಿ ಪ್ರಮುಖ ಪಾತ್ರ ವಹಿಸಿದ್ದು 'ಸಂಭವ್'. ಪೂರ್ಣ ಹೆಸರು ಸೆಕ್ಯೂರ್ ಆರ್ಮಿ ಮೊಬೈಲ್ ಭಾರತ್ ಆವೃತ್ತಿ.

'ಸಂಭವ್' ಎನ್ನುವುದು ಭಾರತೀಯ ಸೇನೆ ಬಳಸುವ ವಿಶೇಷ ಸ್ಮಾರ್ಟ್‌ಫೋನ್. ಇದು ಸಾಮಾನ್ಯ ಫೋನ್‌ಗಳಿಗಿಂತ ಭಿನ್ನವಾಗಿದೆ. ಇದರಲ್ಲಿ ಬಳಸುವ ಅಪ್ಲಿಕೇಷನ್‌ಗಳು ಸಹ ಸೇನೆಗೆಂದೇ ರೂಪಿಸಿದ ಆ್ಯಪ್‌ಗಳಾಗಿದ್ದು, ಇವು ಜನಸಾಮಾನ್ಯರು ಬಳಸುವ ಆ್ಯಪ್‌ಗಳಿಗಿಂತ ತೀರಾ ಭಿನ್ನವಾಗಿರುತ್ತವೆ. ಈ ಫೋನ್ ಅನ್ನು ಬಳಸಿಕೊಂಡೇ ಆಪರೇಷನ್ ಸಿಂಧೂರದ ವೇಳೆ ಭಾರತೀಯ ಸೇನೆಯು ಪಾಕಿಸ್ತಾನದ ವಿರುದ್ಧ ಕ್ಷಿಪಣಿ ಸೇರಿದಂತೆ ಹಲವಾರು ರೀತಿ ದಾಳಿ ನಡೆಸಿ ಶಕ್ತಿ ಪ್ರದರ್ಶಿಸಿತ್ತು. ಭಾರತದ ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಅವರು ಕಾರ್ಯಕ್ರಮವೊಂದರಲ್ಲಿ ಸಂಭವ್ ಬಗ್ಗೆ ಮಾಹಿತಿ ಹಂಚಿಕೊಂಡಿದ್ದು, ನಂತರ ಈ ಫೋನ್ ಬಗೆಗಿನ ಸುದ್ದಿಯು ಎಲ್ಲೆಡೆ ವೈರಲ್ ಆಗುತ್ತಿದೆ. 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ವೇಳೆ ನಾವು ಭಾರತದಲ್ಲಿ ಅಭಿವೃದ್ಧಿಪಡಿಸಿದ ಸಂಭವ್ ಎಂಬ ಮೊಬೈಲ್ ಅನ್ನು ಬಳಸಿದ್ದು, ಇದು ಬಹಳಷ್ಟು ಅನುಕೂಲಕಾರಿಯಾಯಿತು ಎಂದು ದ್ವಿವೇದಿ ಅವರು ಹೇಳಿದ್ದರು.


ಉಪೇಂದ್ರ ದ್ವಿವೇದಿ

## ಹೇಗೆ ಭಿನ್ನ ಈ ಸಂಭವ್?

'ಸಂಭವ್' ಮೊಬೈಲ್ ಫೋನ್ ಮೇಡ್ ಇನ್ ಇಂಡಿಯಾ. ಇಲ್ಲಿನ ಮೊಬೈಲ್ ಫೋನ್ ಪರಿಸರ ವ್ಯವಸ್ಥೆಗೆ ಅನುಗುಣವಾಗಿ ರೂಪಿಸಲಾಗಿದೆ. ಬಳಕೆಯಲ್ಲಿರುವ ಎಲ್ಲ ಸ್ಮಾರ್ಟ್‌ಫೋನ್‌ಗಳಿಗಿಂತಲೂ ಬೇರೆ ರೀತಿಯದ್ದೇ ಆಗಿದ್ದು, ಅಗತ್ಯ ಕಾರ್ಯಾಚರಣೆಗಳಲ್ಲಿ ಸೇನೆಯು ಈ ಫೋನ್ ಬಳಸುತ್ತದೆ. ಭದ್ರತೆಯ ವಿಷಯದಲ್ಲೂ ಸೇನೆಗೆ ಪೂರಕವಾಗಿದ್ದು, ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತದೆ. ಜೊತೆಗೆ 'ಎಂಡ್ ಟು ಎಂಡ್' ಸುರಕ್ಷಿತ ಸಂವಹನ ವ್ಯವಸ್ಥೆಯನ್ನೂ ಹೊಂದಿದೆ. ಇದು ಸೇನಾಧಿಕಾರಿಗಳ ಸಂಭಾಷಣೆಯು ಸೋರಿಕೆಯಾಗದಂತೆ ನೋಡಿಕೊಳ್ಳುತ್ತದೆ.

ಸೇನಾ ಕಾರ್ಯಾಚರಣೆಗಳ ಸಮಯದಲ್ಲಿ ಸೇನೆಯು ವಾಟ್ಸ್ ಆ್ಯಪ್ ಬಳಸುವುದಿಲ್ಲ. ವಾಟ್ಸ್‌ಆ್ಯಪ್ ಮಾದರಿಯಂತೆಯೇ ಕಾರ್ಯನಿರ್ವಹಿಸುವ ಎಂ–ಸಿಗ್ನಾದಂತಹ ಆ್ಯಪ್‌ಗಳಿವೆ. ಇವುಗಳ ಮೂಲಕವೇ ಸಂದೇಶಗಳು, ದಾಖಲೆಗಳು, ಫೋಟೊಗಳು ಮತ್ತು ವಿಡಿಯೊಗಳನ್ನು ಅಧಿಕಾರಿಗಳು ಹಂಚಿಕೊಳ್ಳುತ್ತಾರೆ. ಸಂಭವ್ ಫೋನ್ ಸಾಮಾನ್ಯ ಸ್ಮಾರ್ಟ್‌ಫೋನ್‌ಗಳಿಗಿಂತ ಭಿನ್ನವಾಗಿರಲು ಇದುವೇ ಕಾರಣ.

'ಸಂಭವ್' 5ಜಿ ಸ್ಮಾರ್ಟ್‌ಫೋನ್ ಆಗಿದ್ದು, 5ಜಿ ತಂತ್ರಜ್ಞಾನಕ್ಕೆ ಹೊಂದಿಕೊಂಡು ಕಾರ್ಯನಿರ್ವಹಿಸುತ್ತದೆ. ಇನ್ನು ನೆಟ್‌ವರ್ಕ್ ವಿಚಾರಕ್ಕೆ ಬರುವುದಾದರೆ, ಈ ಫೋನ್‌ಗಳನ್ನು ಏರ್‌ಟೆಲ್, ಜಿಯೊದಂತಹ ನೆಟ್‌ವರ್ಕ್‌ಗಳನ್ನು ಬಳಸಿಕೊಂಡು ನಿರ್ವಹಿಸಬಹುದು. ಪ್ರತ್ಯೇಕ ನೆಟ್‌ವರ್ಕ್ ಅಗತ್ಯವಿಲ್ಲ. ಈ ಫೋನ್‌ಗಳಲ್ಲಿ ಸೇನೆಯ ಎಲ್ಲ ಪ್ರಮುಖ ಅಧಿಕಾರಿಗಳ ಸಂಖ್ಯೆಗಳನ್ನು ಇನ್‌ಬಿಲ್ಟ್ ರೂಪದಲ್ಲಿಯೇ ಒದಗಿಸಲಾಗುತ್ತದೆ. ಫೋನ್ ಸಂಪೂರ್ಣವಾಗಿ ಎನ್‌ಕ್ರಿಪ್ಟ್ ಆಗಿದ್ದು, ಕಾಂಟೆಕ್ಟ್ ಮಾಹಿತಿಯನ್ನು ಯಾವುದೇ ಕಾರಣಕ್ಕೂ ಹ್ಯಾಕ್ ಮಾಡಲು ಆಗದು.

### 30 ಸಾವಿರ ಸಂಭವ್ ವಿತರಣೆ

ಜನವರಿ 2025ರ ವರದಿಯೊಂದರ ಪ್ರಕಾರ ಭಾರತೀಯ ಸೇನೆಯು ದೇಶದ ವಿವಿಧ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಸುಮಾರು 30 ಸಾವಿರ ಸಂಭವ್ ಸ್ಮಾರ್ಟ್‌ಫೋನ್‌ಗಳನ್ನು ವಿತರಿಸಿದೆ. ಸುರಕ್ಷಿತ ಡಿವೈಸ್ ಮೂಲಕವೇ ಎಲ್ಲ ರೀತಿಯ ಸಂವಹನ ಹಾಗೂ ಮಾಹಿತಿ ವಿನಿಮಯ ಮಾಡಿಕೊಳ್ಳಲು ಇದು ಉತ್ತಮ ವೇದಿಕೆಯಾಗಿದೆ. ಭಾರತೀಯ ಸೇನೆಯ ಅಗತ್ಯಕ್ಕೆ ತಕ್ಕಂತೆ ಫೋನ್ ಅನ್ನು ಅಭಿವೃದ್ಧಿಪಡಿಸಿದ್ದು, ಇದರಲ್ಲಿ ಬಳಸಿರುವ ತಂತ್ರಜ್ಞಾನವೂ ಭಾರತದ್ದೇ ಆಗಿದೆ.

## ವಾಟ್ಸ್‌ಆ್ಯಪ್ ಬಳಕೆ ನಿಷಿದ್ಧ

ಸೇನಾ ಅಧಿಕಾರಿಗಳು ತಮ್ಮ ಅಧಿಕೃತ ಕೆಲಸ ಕಾರ್ಯಗಳಿಗೆ ವಾಟ್ಸ್‌ಆ್ಯಪ್ ಬಳಕೆ ಮಾಡುವಂತಿಲ್ಲ. ವಾಟ್ಸ್‌ಆ್ಯಪ್‌ಗೆ ಕಟ್ಟುನಿಟ್ಟಿನ ನಿಷೇಧವನ್ನು ಹೇರಲಾಗಿದೆ. ಅಧಿಕಾರಿಗಳು ಈ ಹಿಂದೆ ವಾಟ್ಸ್‌ಆ್ಯಪ್ ಮತ್ತು ಇತರ ಸಾಮಾನ್ಯ ಅಪ್ಲಿಕೇಷನ್‌ಗಳನ್ನು ಬಳಸುತ್ತಿದ್ದರು. ಈ ಆ್ಯಪ್ ಮೂಲಕ ಮಾಹಿತಿ ಮತ್ತು ದಾಖಲೆಗಳನ್ನು ಹಂಚಿಕೊಳ್ಳುತ್ತಿದ್ದರು. ಆದರೆ, ಗೋಪ್ಯವಾಗಿರಬೇಕಿದ್ದ ಈ ಮಾಹಿತಿಯು ಕೆಲವೆಡೆ ಸೋರಿಕೆಯಾಗುತ್ತಿದ್ದವು. ಇದರಿಂದ ಎಚ್ಚೆತ್ತುಕೊಂಡ ಸೇನೆಯು ಅಧಿಕೃತ ಕೆಲಸ ಕಾರ್ಯಗಳಿಗೆ ವಾಟ್ಸ್‌ಆ್ಯಪ್ ಬಳಕೆಗೆ ನಿರ್ಬಂಧ ಹೇರಿದೆ. ಅದರಿಂದ ಎದುರಾಗಿದ್ದ ಸಂವಹನ ಸಮಸ್ಯೆಯನ್ನು ಸಂಭವ್ ನಿವಾರಿಸಿದೆ. ■